**ದಿನಾಂಕ 19.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು :- ಶ್ರೀ ಎಂ.ಡಿ. 1 ರಿಂದ 5ನೇ ಪ್ರತಿವಾದಿಯರ ಪರ ವಕೀಲರಿಂದಃ-**

ನಾನು ವ್ಯಾಸಂಗ ಮಾಡಿಲ್ಲ. ಹಾಗಾಗಿ, ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಈ ಪ್ರಕರಣದಲ್ಲಿ ವಾದ ಪತ್ರವನ್ನು ಸಿದ್ದಪಡಿಸಲು ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿರುತ್ತೇನೆ.

ನನ್ನ ತಂದೆ ಹೆಸರು ಸಿದ್ದೇಗೌಡ ಮತ್ತು ತಾಯಿ ಹೆಸರು ಸಿದ್ದಮ್ಮ ಎಂದರೆ ಸರಿ. ಅವರಿಬ್ಬರೂ ಮರಣ ಹೊಂದಿದ್ದಾರೆ ಎಂದರೆ ಸರಿ. ಅವರಿಗೆ 4 ಜನ ಹೆಣ್ಣುಮಕ್ಕಳು ಮತ್ತು 2 ಜನ ಗಂಡು ಮಕ್ಕಳು ಎಂದರೆ ಸರಿ. ಆ ಹೆಣ್ಣುಮಕ್ಕಳು 1, 3, 4ನೇ ವಾದಿಯರು ಮತ್ತು ಪ್ರಮೀಳಾ ಆಗಿರುತ್ತಾರೆ. ಸದರಿ ಪ್ರಮೀಳಾ ವಿವಾಹಪೂರ್ವದಲ್ಲಿ ಮರಣ ಹೊಂದಿದ್ದಾರೆ ಎಂದರೆ ಸರಿ. ಆ ಗಂಡು ಮಕ್ಕಳಾದ ಪುಟ್ಟಸ್ವಾಮಿ ಮತ್ತು ದೇವರಾಜು ಮರಣ ಹೊಂದಿದ್ದಾರೆ ಎಂದರೆ ಸರಿ. ಸದರಿ ಪುಟ್ಟಸ್ವಾಮಿ ರವರಿಗೆ 6ನೇ ಪ್ರತಿವಾದಿ ಹೆಂಡತಿಯಾಗಿದ್ದು, ಅವರಿಗೆ ವೇದಾ ಮತ್ತು ಕಾವ್ಯ ಎನ್ನುವ ಇಬ್ಬರು ಹೆಣ್ಣು ಮಕ್ಕಳಿದ್ದಾರೆ ಎಂದರೆ ಸರಿ. ಅವರು ಅಪ್ರಾಪ್ತ ವಯಸ್ಕರು ಎಂದರೆ ಸರಿ. ಸದರಿ ವೇದಾ ಮತ್ತು ಕಾವ್ಯ ರವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿ ದೇವರಾಜು ರವರಿಗೆ 2ನೇ ವಾದಿ ಹೆಂಡತಿಯಾಗಿದ್ದು, ಅವರಿಗೆ ಲಕ್ಷ್ಮಿ ಮತ್ತು ರವಿ ಎನ್ನುವ ಮಕ್ಕಳಿದ್ದಾರೆ ಎಂದರೆ ಸರಿ. ಅವರು ಕೂಡ ಅಪ್ರಾಪ್ತ ವಯಸ್ಕರು ಎಂದರೆ ಸರಿ. ಅವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿ ಪುಟ್ಟಸ್ವಾಮಿ ಮತ್ತು ದೇವರಾಜು ರವರ ಮಕ್ಕಳುಗಳನ್ನು ವಾದಪತ್ರದಲ್ಲಿ

ನಮೂದಿಸಿರುವ ವಂಶವೃಕ್ಷದಲ್ಲಿ ತೋರಿಸಿಲ್ಲ ಎಂದರೆ ಸರಿ. ಅವರನ್ನು ಆ ವಂಶವೃಕ್ಷದಲ್ಲಿ ತೋರಿಸಲು ನನಗೆ ತೊಂದರೆ ಇರಲಿಲ್ಲ.

ನನ್ನ ತಂದೆಯ ತಂದೆ ಹೆಸರು ಪುಟ್ಟಲಿಂಗಿಶೀರೇಗೌಡ ಎಂದರೆ ಸರಿ. ಅವರನ್ನು ಶೀರೇಗೌಡ ಎಂದು ಕರೆಯುತ್ತಾರೆ ಎಂದರೆ ಸರಿ. ಅವರಿಗೆ 4 ಜನ ಗಂಡು ಮಕ್ಕಳು ಎಂದರೆ ಸರಿ. ನನ್ನ ತಾತ ಮೂಲತ: ತಿ. ನರಸೀಪುರ ತಾಲ್ಲುಕಿನ ಮಾಕನಹಳ್ಳಿ ಗ್ರಾಮದ ನಿವಾಸಿಯೆಂದರೆ ಸರಿ. ಅವರಿಗೆ ನನ್ನ ತಂದೆ ಹಿರಿಯ ಮಗ ಎಂದರೆ ಸರಿ. ಸದರಿ ಪುಟ್ಟಲಿಂಗಿಶೀರೇಗೌಡ ರವರಿಗೆ ಮಾಯೀಗೌಡ, ರಾಮೇಗೌಡ ಮತ್ತು ಚಿಕ್ಕಕರಗೇಗೌಡ ಉ: ಚಿಕ್ಕಮಾಯಪ್ಪ ಉಳಿದ ಗಂಡು ಮಕ್ಕಳು ಎಂದರೆ ಸರಿ. ಸದರಿ ಚಿಕ್ಕಕರಗೇಗೌಡ ಉ: ಚಿಕ್ಕಮಾಯಪ್ಪ ರವರು 1ನೇ ಪ್ರತಿವಾದಿಯ ಗಂಡ ಮತ್ತು 2 ರಿಂದ 5ನೇ ಪ್ರತಿವಾದಿಯರ ತಂದೆ ಎಂದರೆ ಸರಿ. ನನ್ನ ತಾತ ಮತ್ತು ಅವರ 4 ಜನ ಗಂಡು ಮಕ್ಕಳು ಒಟ್ಟು ಕುಟುಂಬದಲ್ಲಿ ವಾಸವಾಗಿ ಒಟ್ಟಿಗೆ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಾತನ ವಂಶವೃಕ್ಷವನ್ನು ವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ಆ ಕುರಿತು ವಾದಪತ್ರದಲ್ಲಿ ಹೇಳಲು ನನಗೆ ತೊಂದರೆ ಇರಲಿಲ್ಲ. ಉದ್ದೇಶಪೂರ್ವಕವಾಗಿ ಅವರ ವಂಶವೃಕ್ಷವನ್ನು ನಾನು ಹೇಳಿಲ್ಲ ಎಂದರೆ ಸರಿಯಲ್ಲ.

ನನ್ನ ತಾತ ಮರಣ ಹೊಂದಿದ ನಂತರ ನನ್ನ ತಂದೆ ಮೂಲ ಕುಟುಂಬದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ, ಸದರಿ ಚಿಕ್ಕಕರಗೇಗೌಡ ಉ: ಚಿಕ್ಕಮಾಯಪ್ಪ ರವರು ನೋಡಿಕೊಳ್ಳುತ್ತಿದ್ದರು.

ನನ್ನ ತಾತ ಮತ್ತು ಅವರ ನಾಲ್ಕು ಜನ ಗಂಡು ಮಕ್ಕಳು ಪಿತ್ರಾರ್ಜಿತ ಆಸ್ತಿಗಳನ್ನು ಒಟ್ಟಿಗೆ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಅವರಿಗೆ ಮೂಲ ಆದಾಯ ವ್ಯವಸಾಯದಿಂದ ಬರುವ ಆದಾಯವಾಗಿತ್ತು ಎಂದರೆ ಸರಿ.

ನನ್ನ ತಾತ ಮತ್ತು ಅವರ ಮಕ್ಕಳು ಯಾವಾಗ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಯ ಸರ್ವೆ ನಂ.1997/1 ಆಗಿದೆ. ಅದು ಬನ್ನೂರು ಹೋಬಳಿಯ ಮಾಕನಹಳ್ಳಿ ಗ್ರಾಮದಲ್ಲಿ ಬರುತ್ತದೆ. ಸದರಿ ಆಸ್ತಿಯು ಬನ್ನೂರು ಗ್ರಾಮಾಂತರದ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಯಲ್ಲಿ ನಮೂದು ಇದೆ ಎಂದರೆ ಸರಿ. ಹಾಗಾಗಿ, ಆ ಆಸ್ತಿಯು ಮಾಕನಹಳ್ಳಿ ಗ್ರಾಮದ ವ್ಯಾಪ್ತಿಗೆ ಬರುತ್ತದೆ ಎಂದು ನನ್ನ ವಾದಪತ್ರದ ಅನುಸೂಚಿಯಲ್ಲಿ ಹೇಳಿರುವುದು ತಪ್ಪು ಇದೆ ಎಂದರೆ ನನಗೆ ಗೊತ್ತಾಗುವುದಿಲ್ಲ.

ನನ್ನ ತಾತ ಮತ್ತು ಅವರ ಮಕ್ಕಳು ವಿಭಾಗವಾದ ನಂತರ ಅವರವರ ಭಾಗಕ್ಕೆ ಬಂದ ಆಸ್ತಿಗಳನ್ನು ಅವರವರು ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ಆ ರೀತಿ ವಿಭಾಗವಾದ ನಂತರ ಅವರವರ ಹಿಸ್ಸೆಗೆ ಬಂದ ಆಸ್ತಿಗಳ ಖಾತೆಗಳನ್ನು ಅವರವರ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ.

ನನ್ನ ತಾತ ಮತ್ತು ಅವರ ಮಕ್ಕಳು ಒಟ್ಟು ಕುಟುಂಬದಲ್ಲಿದ್ದಾಗ ದಿನಾಂಕ 24.08.1953 ರಂದು ದಾವಾಸ್ತಿಯನ್ನು ನನ್ನ ತಂದೆಯ ಹೆಸರಿಗೆ ಒಟ್ಟು

ಕುಟುಂಬದ ಆದಾಯದಿಂದ ಖರೀದಿಸಲಾಯಿತು ಎಂದರೆ ಸರಿಯಲ್ಲ. ಆ ಆಸ್ತಿಯನ್ನು ಮತ್ತು ಕುಟುಂಬದ ಇತರ ಆಸ್ತಿಗಳನ್ನು ಅವರೆಲ್ಲರೂ ಒಟ್ಟಿಗೆ ವಾಸವಾಗಿದ್ದಾಗ ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಾತ ಮತ್ತು ಅವರ ಮಕ್ಕಳ ಒಟ್ಟು ಕುಟುಂಬಕ್ಕೆ ಒಟ್ಟು ಎಷ್ಟು ಎಕರೆ ಆಸ್ತಿಯಿತ್ತು ಎಂದು ನನಗೆ ಗೊತ್ತಿಲ್ಲ. ಅವರ ನಡುವೆ ಆದ ವಿಭಾಗದಲ್ಲಿ ನನ್ನ ತಂದೆಯ ಭಾಗಕ್ಕೆ ಯಾವ ಯಾವ ಆಸ್ತಿಗಳು ಬಂದವು ಎಂದರೆ ಆ ವೇಳೆಗೆ ನಾವು ಚಿಕ್ಕವರಾಗಿದ್ದರಿಂದ ನನಗೆ ಗೊತ್ತಿಲ್ಲ. ನನಗೆ ತಿಳುವಳಿಕೆ ಬಂದ ನಂತರ ನನ್ನ ತಂದೆಯ ಭಾಗಕ್ಕೆ ಯಾವ ಆಸ್ತಿಗಳು ಬಂದಿದ್ದವು ಎಂದು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ.

ನನ್ನ ತಂದೆಯ ಭಾಗಕ್ಕೆ 10 ಗುಂಟೆಯ, 20 ಗುಂಟೆಯ ಎರಡು ಜಮೀನುಗಳು ಮತ್ತು ಒಂದು ಮನೆಯಲ್ಲಿ ಅರ್ಧ ಭಾಗ ಬಂದಿವೆ. ಆ 20 ಗುಂಟೆ ಜಮೀನನ್ನು 6ನೇ ಪ್ರತಿವಾದಿಯ ಗಂಡನಿಗೆ ನೀಡಿದ್ದು, ಅವರು ಅದನ್ನು ಮಾರಾಟ ಮಾಡಿರುತ್ತಾರೆ. ಉಳಿದ 10 ಗುಂಟೆ ಜಮೀನನ್ನು 2ನೇ ವಾದಿಯ ಗಂಡನಿಗೆ ನೀಡಿದ್ದು, ಅವರು ಅನುಭವಿಸುತ್ತಿದ್ದಾರೆ. ನಾನು, 2ನೇ ವಾದಿ ಮತ್ತು 6ನೇ ಪ್ರತಿವಾದಿಯ ಕುಟುಂಬದವರು ಒಟ್ಟಿಗೆ ದಾವಾಸ್ತಿಯನ್ನು ಅನುಭವಿಸುತ್ತಿದ್ದೇವೆ.

ನನ್ನ ತಂದೆ ಸುಮಾರು 30-40 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಅವರ ಮರಣದ ನಂತರ 6ನೇ ಪ್ರತಿವಾದಿಯ ಗಂಡ ಸದರಿ 20 ಗುಂಟೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ.

ನಾನು 2000 ದಲ್ಲಿ ತುಮಕೂರು ಜಿಲ್ಲೆಯ ಕೌತಮಾರನಹಳ್ಳಿಯ ಉಗ್ರಪ್ಪ ರವರಿಗೆ ವಿವಾಹವಾಗಿರುತ್ತೇನೆ. ನನ್ನ ವಿವಾಹದ ನಂತರ ನಾನು ನನ್ನ ಗಂಡನೊಂದಿಗೆ ವಾಸವಾಗಿರುತ್ತೇನೆ ಎಂದರೆ ಸರಿ. ಅದೇ ರೀತಿ ನನ್ನ ಸಹೋದರಿಯರು ವಿವಾಹವಾಗಿ ಅವರವರ ಗಂಡಂದಿರ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ.

2ನೇ ವಾದಿಯ ಗಂಡ ಮತ್ತು 6ನೇ ಪ್ರತಿವಾದಿಯ ಗಂಡ ಬದುಕಿದ್ದಾಗ ಅವರು ವಿಭಾಗವಾಗಿ ಅವರವರ ಕುಟುಂಬದ ಜೊತೆ ವಾಸವಾಗಿದ್ದರು ಎಂದರೆ ಸರಿ. ನನ್ನ ವಿವಾಹದ ಪೂರ್ವದಲ್ಲಿ ಆ ರೀತಿ ವಿಭಾಗವಾಗಿ ವಾಸವಾಗಿ ಬಂದಿರುತ್ತಾರೆ. ಆ ವಿಭಾಗದ ವೇಳೆಗೆ ನನಗೆ ವಿವಾಹವಾಗಿರದ ಕಾರಣ ನನಗೆ ಮತ್ತು ನನ್ನ ತಮ್ಮ ದೇವರಾಜು (2ನೇ ವಾದಿಯ ಗಂಡ) ರವರಿಗೆ ದಾವಾಸ್ತಿಯನ್ನು ನೀಡಿದ್ದು, ನನ್ನನ್ನು ಯಾರು ವಿವಾಹ ಮಾಡುತ್ತಾರೋ ಅವರು ದಾವಾಸ್ತಿಯನ್ನು ಹೊಂದಬಹುದು ಎಂದು ಮಾತುಕತೆಯಾಗಿತ್ತು.

ನನ್ನ ವಿವಾಹವನ್ನು ಯಾರು ಮಾಡಿದರು ಎಂದರೆ ನಾನು ಗಾರ್ಮೆಂಟ್ಸ್‌ಗೆ ಹೋಗುತ್ತಿದ್ದು, ನನ್ನ ಬಳಿ ಹಣ ಇದ್ದು, ಆ ಹಣದಲ್ಲಿ ಮತ್ತು ನನ್ನ ಸಹೋದರಿಯರು, ಅವರ ಗಂಡಂದಿರು ಹಾಗೂ ನನ್ನ ತಮ್ಮ ದೇವರಾಜು ಸೇರಿ ನನ್ನ ವಿವಾಹವನ್ನು ಮಾಡಲಾಯಿತು. ನನ್ನ ಅಣ್ಣ ಪುಟ್ಟಸ್ವಾಮಿ ನನ್ನ ವಿವಾಹವನ್ನು ಮಾಡಲಿಲ್ಲ.

ದಾವಾಸ್ತಿಯನ್ನು ನನ್ನ ವಿವಾಹದ ಸಂಬಂಧ ಬಿಡಲಾಯಿತು ಎಂದು ತೋರಿಸಲು ದಾಖಲೆ ಇದೆಯೇ ಎಂದರೆ ನನ್ನ ತಂದೆ ಮತ್ತು ಸಹೋದರರ ನಡುವೆ

ಆದ ಪಾಲುಪಾರಿಕತ್ತಿನಲ್ಲಿ ನಮೂದು ಇದೆ. ಆ ಪಾಲುಪಾರಿಕತ್ತನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಹಾಗಾಗಿ, ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾಸ್ತಿಯು ನನ್ನ ತಾತನ ಒಟ್ಟು ಕುಟುಂಬದ ಆಸ್ತಿಯಾಗಿದ್ದರಿಂದ ಅವರ ಮತ್ತು ಅವರ ಮಕ್ಕಳ ನಡುವೆ ಆದ ವಿಭಾಗ ಪತ್ರದಲ್ಲಿ ಬಾಯಿ ಮಾತಿನ ಮೂಲಕ 1ನೇ ಪ್ರತಿವಾದಿಯ ಗಂಡ ಮತ್ತು 2 ರಿಂದ 5ನೇ ಪ್ರತಿವಾದಿಯರ ತಂದೆಯ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಆ ವಿಭಾಗದ ಪ್ರಕಾರ ಅವರ ಹೆಸರಿಗೆ ಐ ಎನ್ ಹೆಚ್ ಸಂಖ್ಯೆ 52/2000-01 ಆಗಿದೆ ಎಂದರೆ ನನ್ನ ವಿವಾಹದ ನಂತರ ಅಂದರೆ 2018 ರಲ್ಲಿ ನಾನು ದಾವಾಸ್ತಿಯ ಖಾತೆಯನ್ನು ನನ್ನ ಹೆಸರಿಗೆ ಮಾಡಿಸಿಕೊಳ್ಳಲು ಹೋದಾಗ ಆ ಐ ಎನ್ ಹೆಚ್ ಆಗಿರುವುದು ನನಗೆ ತಿಳಿದು ಬಂತು. ಸದರಿ ಐ ಎನ್ ಹೆಚ್‌ನ್ನು ನಾನು, ವಾದಿಯರು, 6ನೇ ಪ್ರತಿವಾದಿ ಹಾಗೂ ಇತರ ಕುಟುಂಬದ ಸದಸ್ಯರು ಪ್ರಶ್ನಿಸಿದ್ದೀರಾ ಎಂದರೆ ನನ್ನ ತಮ್ಮ ದೇವರಾಜು ತಹಶೀಲ್ದಾರ್ ರವರ ಮುಂದೆ ತಕರಾರು ಅರ್ಜಿಯನ್ನು ಅದು ದಾಖಲಾಗುವ ವೇಳೆಗೆ ನೀಡಿದ್ದನು. ಆ ತಕರಾರು ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರಬಹುದು.

1ನೇ ಪ್ರತಿವಾದಿಯ ಗಂಡ ಮತ್ತು 2 ರಿಂದ 5ನೇ ಪ್ರತಿವಾದಿಯರ ತಂದೆರವರು 2007 ರಲ್ಲಿ ಮರಣ ಹೊಂದಿದರು ಎಂದರೆ ನನಗೆ ಗೊತ್ತಿಲ್ಲ. ಅವರು ಬದುಕಿರುವವರೆಗೂ ದಾವಾಸ್ತಿಯ ಖಾತೆಯು ಅವರ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ಅವರ ಹೆಸರಿಗೆ ಖಾತೆಯಾದ ನಂತರ ಅವರು ಮತ್ತು ಅವರ

ಕುಟುಂಬದವರು ದಾವಾಸ್ತಿಯನ್ನು ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

ದಾವಾಸ್ತಿಯ ಖಾತೆಯು ಎಂದಿಗೂ ನನ್ನ ತಂದೆ ಮತ್ತು ಅವರ ವಾರಸುದಾರರ ಹೆಸರಿನಲ್ಲಿ ಆಗಿಲ್ಲ ಎಂದರೆ ಸರಿ. ನಿಪಿ.2 ರ ಐ ಎನ್ ಹೆಚ್ ಸಂಖ್ಯೆ 52/2000-01 ರಲ್ಲಿ ಕಂಡು ಬರುವಂತೆ ದಾವಾಸ್ತಿಯ ಖಾತೆಯು ವಾರಸುನಾತೆಯಿಂದ 1ನೇ ಪ್ರತಿವಾದಿಯ ಗಂಡ ಮತ್ತು 2 ರಿಂದ 5ನೇ ಪ್ರತಿವಾದಿಯರ ತಂದೆಯ ಹೆಸರಿಗೆ ದಾಖಲಾಗಿದೆ ಎಂದರೆ ಸರಿಯಲ್ಲ. ಸದರಿ ಐ ಎನ್ ಹೆಚ್ ಪ್ರಕಾರ ಅವರ ಹೆಸರು 2016-17 ರವರೆಗೂ ಪಹಣಿ ಪತ್ರಿಕೆಗಳಲ್ಲಿ ನಮೂದಾಗಿವೆ ಎಂದರೆ ನನಗೆ ಗೊತ್ತಿಲ್ಲ. ಆನಂತರ 1ನೇ ಪ್ರತಿವಾದಿಯ ಹೆಸರಿಗೆ ನಿಪಿ.4 ರ ಎಂ.ಆರ್. ಸಂಖ್ಯೆ ಹೆಚ್-259/2016-17 ರಂತೆ ನಮೂದಾಗಿದೆ ಎಂದರೆ ನಾವು ತಕರಾರು ಮಾಡಿದರು ಕೂಡ ನಮೂದಾಗಿರುತ್ತದೆ. ಸದರಿ ಖಾತೆಯನ್ನು ಪ್ರಶ್ನಿಸಿ ಉಪ ವಿಭಾಗಾಧಿಕಾರಿ ನ್ಯಾಯಾಲಯ, ಮೈಸೂರಿನಲ್ಲಿ ಮೇಲ್ಮನವಿ ದಾಖಲಿಸಿರುತ್ತೇವೆ. ಅದು ನಿಪಿ.8 ರ ಆದೇಶದಂತೆ ವಜಾಗೊಂಡಿದೆ ಎಂದರೆ, ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುವಂತೆ ತಿಳಿಸಿ ಅದನ್ನು ವಜಾಗೊಳಿಸಲಾಗಿದೆ.

ಆನಂತರವೂ ಕೂಡ 1 ರಿಂದ 5ನೇ ಪ್ರತಿವಾದಿಯರು ಕೂಡ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ತಿಯ ಸ್ವಾಧೀನದಲ್ಲಿ ನಾವು ಇದ್ದೇವೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ

ಎಂದರೆ ಸರಿಯಲ್ಲ. ದಾವಾಸ್ತಿಯ ಮೇಲೆ ನಮಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. 1 ರಿಂದ 5ನೇ ಪ್ರತಿವಾದಿಯರಿಗೆ ಸೇರಿರುವ ದಾವಾಸ್ತಿಯನ್ನು ಕಬಳಿಸುವ ಸಲುವಾಗಿ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು,**
**ತಿ.ನರಸೀಪುರ**